ಕೆ.ಪಿ.ಎಲ್.ಗೆ ಭೂಮಿ ನೀಡಿಕೆಗೆ ವಿರೋಧ

3625 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್‌ಗೆ (ಕೆಪಿಎಲ್) ರಾಜ್ಯದ 75 ಸಾವಿರ ಎಕರೆ ಭೂಮಿಯನ್ನು ಕೊಟ್ಟಿರುವುದನ್ನು ವಿರೋಧಿಸಿ ರಾಜ್ಯದ ಜನತೆ ಹಾಗೂ 72 ಜನ ಶಾಸಕರು ಸರ್ಕಾರಕ್ಕೆ ಮನವಿ ಕೊಟ್ಟಿರುವುದನ್ನು ಸರ್ಕಾರ ಗಮನಿಸಿದೆಯೇ?*

ಆ) *ಕೆ.ಪಿ.ಎಲ್‌ನ್ನು ರದ್ದುಪಡಿಸಿ ಅದಕ್ಕೆ ಕೊಟ್ಟಿರುವ 75 ಸಾವಿರ ಎಕರೆ ರಾಜ್ಯ ಭೂಮಿಯನ್ನು ಪರಿಶಿಷ್ಟ ಜಾತಿ ಜನಾಂಗದವರಿಗೆ ಹಾಗೂ ಬಡ ರೈತರಿಗೆ ಸಾಮಾಜಿಕ ಅರಣ್ಯ ಅಭಿವೃದ್ಧಿ ಪಡಿಸಲು ವಿತರಣೆ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಇ) *ಈ ಬಗ್ಗೆ ಸರ್ಕಾರದ ಕ್ರಮ ಹಾಗೂ ನೀತಿಯೇನು?*

ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ಗಮನಿಸಿದೆ.

ಆ) ಕೆ.ಪಿ.ಎಲ್‌ನ್ನು ರದ್ದುಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಕೆ.ಪಿ.ಎಲ್. ರದ್ದುಪಡಿಸುವ ನಿರ್ಧಾರ ಆಧರಿಸಿ ಸರ್ಕಾರ ಮುಂದಿನ ಕ್ರಮದ ಬಗ್ಗೆ ಪರಿಗಣಿಸಬೇಕಾಗಿರುತ್ತದೆ.

ಕೊಂಕಣ ರೈಲ್ವೆ ಯೋಜನೆ ಭೂಸ್ವಾಧೀನಕ್ಕೆ ಪರಿಹಾರ

2482 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರಮಾಣದ ರೈತರು ಸಾಗುವಳಿ ಮಾಡುತ್ತಿರುವ ಭೂಮಿ, ಗದ್ದೆ, ತೋಟಗಳನ್ನು ಕೊಂಕಣ ರೈಲ್ವೆ ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)*

ಆ) *ಭೂಸ್ವಾಧೀನ ಪಡಿಸಿಕೊಂಡ ರೈತರುಗಳ ಸಾಗುವಳಿ ಭೂಮಿ ಗದ್ದೆ, ತೋಟಗಳಿಗೆ ಇದುವರೆಗೂ ಪರಿಹಾರದ ಹಣವನ್ನು ನೀಡುವಲ್ಲಿ ವಿಳಂಬವಾಗುತ್ತಿರುವುದು ನಿಜವೇ?*

ಇ) *ಹಾಗಿದ್ದಲ್ಲಿ ಇದುವರೆಗೂ ಎಷ್ಟು ಜನ ರೈತರುಗಳಿಗೆ ಪರಿಹಾರ ಧನವನ್ನು ನೀಡಲಾಗಿದೆ. ಮತ್ತು ಈ ಪ್ರತಿಯೊಬ್ಬ ರೈತರಿಗೂ ನೀಡಿರುವ ಪರಿಹಾರಧನದ ಮೊತ್ತವೆಷ್ಟು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 1133 ಎಕರೆ (ಕಾರವಾರ 248 ಎಕರೆ, ಕುಮಟ 215 ಎಕರೆ, ಅನ್‌ಕೋಲಾ 211 ಎಕರೆ, ಹೊನ್ನಾವರ 244 ಎಕರೆ, ಭಟ್ಕಳ್ 215 ಎಕರೆ)

ಆ) ಹೌದು.

ಇ) 23 ಜನರಿಗೆ ರೂ. 6,62,100.00 ಗಳ ಪರಿಹಾರ ಧನವನ್ನು ನೀಡಲಾಗಿದೆ.

ಹೊಸ ತಾಲ್ಲೂಕು ಜಿಲ್ಲೆಗಳ ರಚನೆ

2537 - ಶ್ರೀ ಜಿ.ಎಸ್. ಆಚಾರ್, (ಬೈಂದೂರು) : ಮಾನ್ಯ ಕಂದಾಯ ಸಚಿವರು

ಅ) ರಾಜ್ಯ ಪುನರ್ವಿಂಗಡಣಾ ಆಯೋಗಗಳ ವರದಿ ಪ್ರಕಾರ ಹೊಸ ಜಿಲ್ಲೆ ಹಾಗೂ ತಾಲ್ಲೂಕುಗಳ ರಚನೆ ಕುರಿತು ಯಾವಾಗ ಸರ್ಕಾರದ ಅಂತಿಮ ಪರಿಶೀಲನೆ ಮುಗಿಯುವುದು ಹಾಗೂ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು?

ಆ) ಶಿಫಾರಸ್ಸಿನ ಪ್ರಕಾರ ಹೊಸ ಜಿಲ್ಲೆ ತಾಲ್ಲೂಕುಗಳ ರಚನೆಗೆ ತೊಡಕುಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಆರ್ಥಿಕ ಮುಗ್ಗಟ್ಟಿನ ಹೊರತು ಹೆಚ್ಚಿನ ಅಡೆತಡೆಗಳೇನಿಲ್ಲ.

ಅರಣ್ಯ ಇಲಾಖೆಯ ಪ್ಲಾಂಟೇಷನ್ ಕಾರ್ಮಿಕರಿಗೆ ನೇರ ಪಾವತಿ ಜಾರಿಗೆ ತಂದಿರುವ ಬಗ್ಗೆ

3628 - ಶ್ರೀ ಜಿ.ಎಸ್. ಆಚಾರ್ (ಬೈಂದೂರ್) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಲ್ಲಿ ಪ್ಲಾಂಟೇಷನ್ ಕೆಲಸಗಾರರಿಗೆ ನೇರಪಾವತಿ ಪದ್ಧತಿ ಜಾರಿಗೆ ಎಂದಿನಿಂದ ಬಂದಿದೆ ಹಾಗೂ ಅದಕ್ಕೆ ಕಾರಣಗಳೇನು?

ಆ) ನೇರಪಾವತಿ ವ್ಯವಸ್ಥೆ ಇದ್ದರೂ, ಕೆಲಸದ ಮೇಲ್ವಿಚಾರಣೆಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ. ಹಾಗೂ ಈ ಹೊಣೆಗಾರಿಕೆ ಎಷ್ಟರಮಟ್ಟಿಗೆ ಯಶಸ್ವಿ ಆಗಿದೆ?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)

ಅ) ಈ ನೇರಪಾವತಿ ಪದ್ಧತಿಯು ದಿನಾಂಕ 16-7-90ರಿಂದ ಜಾರಿಗೆ ಬಂದಿರುತ್ತದೆ. ಇದಕ್ಕೆ ಕಾರಣವೇನೆಂದರೆ ಪ್ಲಾಂಟೇಷನ್ ಕೆಲಸಗಾರರಿಗೆ ಅವರು ತಿಂಗಳಲ್ಲಿ ಕೆಲಸ ಮಾಡಿದ ದಿವಸಗಳಿಗೆ ನಿಗದಿಯಾದ ದಿನಗೂಲಿ ಸಕಾಲಕ್ಕೆ ಮತ್ತು ಸರಿಯಾಗಿ ಹಾಗೂ ಸಂಬಂಧಪಟ್ಟವರಿಗೆ ಹಾಲಿ ನಿಯಮದ ರೀತ್ಯಾ ನೇರ ಪಾವತಿಯಾಗಬೇಕೆಂಬ ಉದ್ದೇಶದಿಂದ ಈ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

ಆ) ಕೆಲಸದ ಮೇಲ್ವಿಚಾರಣೆಗೆ ಇಲಾಖೆಯ ಅಧಿಕಾರಿಗಳನ್ನು ಅಂದರೆ ವಲಯ ಅರಣ್ಯಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಇವರುಗಳನ್ನೇ ಮೇಲ್ವಿಚಾರಣೆಗೆ ಹೊಣೆಗಾರರನ್ನಾಗಿ ಮಾಡಲಾಗಿದೆ. ಈ ಹೊಣೆಗಾರಿಕೆಯನ್ನು ಸರಕಾರ, ಸಾರ್ವಜನಿಕ ಮತ್ತು ಕೆಲಸಗಾರರ ಹಿತದೃಷ್ಟಿಯಿಂದ ಮಾಡಿದ್ದು, ಈ ಕಾರ್ಯ ತೃಪ್ತಿಕರವಾಗಿ ನಡೆಯುತ್ತಿದೆ.

ರಾಜ್ಯದ ರೈತರಿಗೆ ಪಾಸ್ ಪುಸ್ತಕ ವಿತರಣೆ

3662 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರೈತರಿಗೆಲ್ಲ ಅವರ ಭೂಮಿಯ ವಿವರಗಳನ್ನೊಳಗೊಂಡ ಪಾಸು ಪುಸ್ತಕಗಳನ್ನು ವಿತರಿಸುವ ಕಾರ್ಯವನ್ನು ಸರ್ಕಾರ ಹಮ್ಮಿಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈವರೆವಿಗೆ ರಾಜ್ಯದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಪಾಸು ಪುಸ್ತಕಗಳನ್ನು ವಿತರಿಸಲಾಗಿದೆ? (ತಾಲ್ಲೂಕುವಾರು ವಿವರವನ್ನೊದಗಿಸುವುದು)

ಇ) ರೈತರಿಗೆ ಪಾಸು ಪುಸ್ತಕಗಳನ್ನು ಒದಗಿಸುವ ಕಾರ್ಯ ತುಂಬಾ ನಿಧಾನಗತಿಯಲ್ಲಿ ಸಾಗುತ್ತಿರುವುದು ನಿಜವಾಗಿದೆ?